ತನ್ನ ತಾಯಿ ಮಾಧವಿ ಮತ್ತು ಅಜ್ಜಿ ಚಿತ್ರಾವತಿಯೊಡನೆ ಚಕ್ರವಾಳ ಕೋಟೆಯ ಧರ್ಮಶಾಲೆಯಲ್ಲಿ ಬಡವರಿಗೆ ಅನ್ನದಾನ ಮಾಡುತ್ತಾ ಇದ್ದಾಳೆಂದು ಕೇಳಿ ತಿಳಿದಿದ್ದರು.

ಶಾತ್ತನಾರ್ ಮೌನವಾಗಿರುವುದನ್ನು ಕಂಡು 'ಅಯ್ಯಾ, ನೀವೂ ಇಂಥದ್ದೇ ವಿನಾಶವನ್ನು ಕಂಡವರು. ಅಂದು ಕನ್ನಗಿಯ ಶಾಪಕ್ಕೆ ತುತ್ತಾಗಿ ಇಡೀ ಮಧುರೆ ಸುಟ್ಟುಹೋಗಿದ್ದನ್ನು ಕಣ್ಣಾರೆ ಕಂಡವರಲ್ಲಿ ನೀವೂ ಒಬ್ಬರು. ನಮ್ಮ ನೋವು ನಿಮಗೆ ತಿಳಿಯಬಲ್ಲದು...'

'.... ನೆನಪಿಸಬೇಡಿ ಆ ದಿನವನ್ನು. ಕನ್ನಗಿಯ ಶಾಪಕ್ಕೆ ತುತ್ತಾಗಿ ಮಧುರೆ ಹೇಗೆ ಸುಟ್ಟಿತು ಎನ್ನುವುದನ್ನು ಇಳಂಗೋ ಅಡಿಗಳ ಜೊತೆಯಲ್ಲಿಯೇ ನೋಡಿದ ನತದೃಷ್ಟರಲ್ಲಿ ನಾನೂ ಒಬ್ಬ. ದನಕರುಗಳೂ, ಮುಪ್ಪಾದವರು, ಮಹಿಳೆಯರು ಮತ್ತು ಮಕ್ಕಳನ್ನು ಬಿಟ್ಟು ಎಲ್ಲರೂ ದಗ್ಧವಾದರು. ಬದುಕುಳಿದವರು ಮಧುರೆಯನ್ನು ತೊರೆದು ಹೋದರು! ಕನ್ನಗಿಯ ಶಾಪದ ಉರಿಯಲ್ಲಿ ಸೀದು ಹೋದ ಮಧುರೆಯ ನೆನಪು ನನಗಿನ್ನೂ ಬಾಧಿಸುತ್ತಿದೆ. ಸುಟ್ಟ ಮಧುರೆಯ ಬೀದಿಗಳಲ್ಲಿ ಜನ ಅನ್ನಕ್ಕಾಗಿ ಅಂಗಲಾಚುತ್ತಿದ್ದುದನ್ನು ನೋಡಲಾರದೆ ನಾನು ಕಣ್ಣುಮುಚ್ಚಿಕೊಂಡೆ. ಅನ್ನವಿಲ್ಲದೆ ಜನ ಇನ್ನು ಸಾಯಬಾರದು, ಹಸಿವಿನಿಂದ ಕಣ್ಣೀರು ಸುರಿಸುವವರು ಇನ್ನು ಲೋಕದ ಮೇಲೆ ಯಾರೂ ಇರಬಾರದು ಎಂದು ಅಂದೇ ಸಂಕಲ್ಪ ಮಾಡಿಕೊಂಡೆ. ಆಗಲೇ ಮಣಿಮೇಕಲೆ ಅವತರಿಸಿದ್ದು. ಮಣಿಮೇಕಲೆ ನಾನು ಸೃಷ್ಟಿಸಿದ ದೇವತೆಯಲ್ಲ! ಲೋಕದ ಜನತೆ ತಮ್ಮ ಸಂಕಟವೆಲ್ಲಾ ಕೊನೆಗಾಣಬೇಕು ಎಂದು ಸೃಷ್ಟಿಸಿಕೊಂಡ ಹೆಣ್ಣು. ಲೋಕದಲ್ಲಿ ಹಸಿವು ಇರುವವರೆಗೂ ಮಣಿಮೇಕಲೆ ಬಡವರೊಂದಿಗೆ ಜೀವಿಸುತ್ತಾಳೆ. ಲೋಕದ ಜನವೆಲ್ಲಾ ಅವಳು ದೇವರ ಕಾರ್ಯ ಮಾಡುತ್ತಿದ್ದಾಳೆ ಎಂದು ಭಾವಿಸಿದ್ದಾರೆ; ಆದರೆ ಅವಳು ನಿಜಕ್ಕೂ ಮಾಡುತ್ತಿರುವುದು ದೀನ ದರಿದ್ರರಿಗೆ ಅನ್ನ ನೀಡುವ ಕೆಲಸ.'

'ಅಯ್ಯಾ, ಮಣಿಮೇಕಲೆಯನ್ನು ನಮ್ಮ ನಾಡಿಗೆ ಕಳುಹಿಸಿಕೊಡುತ್ತೀರಾ? ಹಸಿದ ನಮ್ಮ ಮಕ್ಕಳಿಗೆ ಅವಳಿಂದಾಗಿ ಅನ್ನವನ್ನಾದರೂ ಕೊಡುತ್ತೇವೆ' ಬಂದಿದ್ದವರಲ್ಲಿ ಆರ್ತಳಾಗಿ ನಿಂತಿದ್ದ ಒಂದು ಹೆಣ್ಣು ಕೇಳಿತು. ಹಸಿವಿನಿಂದ ಬಾಡಿದ್ದ ದೇಹ, ಎಣ್ಣೆ-ನೀರು ಕಾಣದ ಅವಳ ಕೆಂಗೂದಲು, ಆಸೆಗಳೇ ಬತ್ತಿಹೋದ ಕಣ್ಣುಗಳು, ನಿಸ್ತೇಜವಾದ ಮುಖ ಆ ಹೆಣ್ಣಿನ ಅಸಹಾಯಕತೆಯನ್ನು ಹೇಳುತ್ತಿತ್ತು. ಅವಳನ್ನು ಹೆಚ್ಚು ಹೊತ್ತು ದಿಟ್ಟಿಸಲಾಗದೆ ಶಾತ್ತನಾರ್ ನೋವಿನಲ್ಲಿ ಮುಳುಗಿದರು. ಅವರ ಕಣ್ಣುಗಳಿಂದ ಎರಡು ಹನಿ ನೀರು ಭೂಮಿಗೆ ಬಿದ್ದದ್ದು ಕತ್ತಲಿನಲ್ಲಿ ಯಾರಿಗೂ ಅಷ್ಟಾಗಿ ಕಾಣಲಿಲ್ಲ. ಶಾತ್ತನಾರ್ ಅದನ್ನು ತೋರಗೊಡದೆ:

'ಬಂಧುಗಳೇ, ನಿಮ್ಮ ದುಃಖದ ಮುಂದೆ ಮಧುರೆ ಮಣಿದಿದೆ. ಬಡವರಿಗೆ ಅನ್ನ ನೀಡದ ರಾಜ, ಅನ್ನ ನೀಡದ ಧರ್ಮ ಭೂಮಿಯ ಮೇಲೆ ಇಲ್ಲದಿದ್ದರೆ ಯಾರಿಗೂ ನಷ್ಟವಿಲ್ಲ! ಹೋಗಿ ಬನ್ನಿ ಚೇರನಾಡಿನ ಪುಹಾರ್‌ಗೆ. ಕನ್ನಗಿ ಸ್ವರ್ಗಸ್ಥಳಾಗಿ ಕೋವಲನನ್ನು ಕೂಡಿಕೊಂಡ ಪೂಹಾರ್‌ಗೆ. ಮಧುರೆ ದೇವತೆ ಈಗ ಅನ್ನದೇವತೆಯೆಡೆಗೆ ದಾರಿ ತೋರಿದ್ದಾಳೆ. ನೀರದಾರಿಯೆಡೆಗೆ ಹೋಗುವ ಹಾದಿ ತೋರಿದ್ದಾಳೆ. ಹೋಗಿಬನ್ನಿ.

ದೂರದ ಚೇರನಾಡಿನಲ್ಲೊಂದು ಹಣತೆಯಿದೆ. ಅಲ್ಲಿ ಸುಖ ಶಾಂತಿಗಳು ಕೈಹಿಡಿದು ಬಾಳುವೆ ಮಾಡುತ್ತಿವೆ. ನೀವು ಆ ಬೆಳಕನ್ನು ಕಂಡರೆ, ಅದು ನಿಮಗೆ ಅನ್ನ ಮತ್ತು ನೀರನ್ನು ಕೊಡುತ್ತದೆ. ಬೆಟ್ಟ ಕಮರಿಗಳ ಸಮೀಪ, ಸಾಗರದ ದಡದಲ್ಲಿರುವ ಆ ಹಣತೆಯ ಕೆಳಗೆ, ಹಸಿದು ಬಂದವರಿಗೆ ಭರವಸೆಯ ನೆರಳಿದೆ. ಆ ಹಣತೆಯ ಹೆಸರು ಮಣಿಮೇಕಲೆ. ಅಲ್ಲಿನ ವಿಹಾರದಲ್ಲಿ ಮಣಿಮೇಕಲೆ ಇದ್ದಾಳೆ. ತನ್ನ ತಾಯಿ ಮಾಧವಿಯೊಡನೆ, ಸ್ಥವಿರ ಅರವಣ ಅಡಿಗಳ ಸನ್ನಿಧಿಯಲ್ಲಿ. ತಾನು ಮಣಿಪಲ್ಲವ ದ್ವೀಪದಲ್ಲಿ ಗುರುಕರುಣೆಯಿಂದ ಪಡೆದಿದ್ದ ಅಮೃತ ಸುರಭಿ ಅಕ್ಷಯ ಪಾತ್ರೆಯಿಂದ ಅನ್ನವೇ ಜನರ ಜೀವನವೆಂದು ಭಾವಿಸಿ, ಬಡಬಗ್ಗರಿಗೆ ಅನ್ನ ನೀಡುತ್ತಾ ಧರ್ಮಕಾರ್ಯದಲ್ಲಿ ನಿರತಳಾಗಿದ್ದಾಳೆ. ಮಣಿಮೇಕಲೆ ಉನ್ನತ ಮಟ್ಟದ ಕಾವ್ಯ. ಪ್ರೇಮವೇ ಅವಳ ಕಾವ್ಯದ ಭಾಷೆ. ಅದು ಎಲ್ಲರ ಹೃದಯಕ್ಕೂ ಅವರವರ ಭಾಷೆಗೆ ಅನುವಾದಗೊಳ್ಳುತ್ತಿರುತ್ತದೆ. ಜಗತ್ತಿನೆಲ್ಲೆಡೆ ಸೂರ್ಯ ಚಂದ್ರರ ಬೆಳಕು ಅವರವರ ಭಾಷೆಗೆ ಅನುಗುಣವಾಗಿ ಕರೆಸಿಕೊಳ್ಳುವಂತೆ:

ಇಂದು ಕಾಂಚೀಪುರ

ನಾಳೆ ಮಧುರೆ

ನಾಡಿದ್ದು ಕಾವೇರಿಪಟ್ಟಣ ಹೀಗೆ ಎಲ್ಲ